ಸರ್ಕಾರಕ್ಕೆ ಆದಾಯ ಬರುವ ವಿವಿಧ ಬಾಬ್ತುಗಳಲ್ಲಿ ತೆರಿಗೆ ಸೋರಿಕೆಯಾಗುತ್ತಿರುವ ಕ್ಷೇತ್ರಗಳು

1410 (1617) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಹಣಕಾಸು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರ್ಥಿಕ ಇಲಾಖೆಯಲ್ಲಿ ಸರ್ಕಾರಕ್ಕೆ ಆದಾಯ ಬರುವ ವಿವಿಧ ಬಾಬ್ತುಗಳ ತೆರಿಗೆ ಸೋರಿಕೆಯಾಗುತ್ತಿರುವ ಕ್ಷೇತ್ರಗಳು ಯಾವುವು; (ವಿವರಗಳನ್ನು ಒದಗಿಸುವುದು)

ಆ) ತೆರಿಗೆ ಸೋರಿಕೆಯಾಗುತ್ತಿರುವುದನ್ನು ತಪ್ಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ರೀತಿಯ ಅಭಿವೃದ್ಧಿ ಅಥವಾ ಪ್ರಯೋಜನಗಳಾಗಿದೆ: ಈ ಕ್ರಮಗಳಿಂದ ಯಾವ (ವಿವರ ಒದಗಿಸುವುದು)

ಇ) ಕಳೆದ 10 ಆರ್ಥಿಕ ವರ್ಷಗಳಲ್ಲಿ ಯಾವ ಪ್ರಮಾಣದಲ್ಲಿ ತೆರಿಗೆ ಸೋರಿಕೆಯನ್ನು ತಡೆಗಟ್ಟಲಾಗಿದೆ? ಅಂಕಿಅಂಶ ನೀಡುವುದು.

ಶ್ರೀ ಎಸ್. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :

ಅ) ತೆರಿಗೆ ಸೋರುವಿಕೆಯಾಗುತ್ತಿರುವ ಕ್ಷೇತ್ರಗಳು :

1) ಕರ್ನಾಟಕ ಮಾರಾಟ ತೆರಿಗೆ ಕ್ಷೇತ್ರದಲ್ಲಿ ಕೆಲವು ಪ್ರಮುಖ ಸರುಕಗಳು ಅಂದರೆ ಮದ್ಯ, ಪ್ರಿಂಟ್ ಉಪಕರಣಗಳ, ಆಟೋಮೋಬೈಲ್ ಬಿಡಿ ಭಾಗಗಳು, ಮೆಷಿನರಿ, ಕಬ್ಬಿಣ ಮತ್ತು ಉಕ್ಕು, ಕಂಚು ಮತ್ತು ತಾಮ್ರ ಎಣ್ಣೆ ಬೀಜಗಳು, ಅಡಿಕೆ, ಖಾದ್ಯ, ತೈಲ, ಇತ್ಯಾದಿಗಳ ತೆರಿಗೆದಾರರು ತೆರಿಗೆ ತಪ್ಪಿಸುವಿಕೆಯಿಂದಾಗಿ ಸೋರಿಕೆ ಆಗುತ್ತಿರುತ್ತದೆ.

2) ಮನರಂಜನಾ ತೆರಿಗೆ ಅಡಿಯಲ್ಲಿ ಕನ್ನಡೇತರ ಚಿತ್ರಗಳನ್ನು ಪ್ರದರ್ಶಿಸಿ ಕನ್ನಡವೆಂದು ವಿನಾಯಿತಿ ಪಡೆಯುವುದುಹಾಗೂ ಪ್ರದರ್ಶನ ಸಂಖ್ಯೆಗಳನ್ನು ಕಡಿಮೆ ತೋರಿಸುವುದರ ಮೂಲಕ ತೆರಿಗೆ ಸೋರಿಕೆಯಾಗುತ್ತಿದೆ.

3) ಪ್ರಮುಖವಾಗಿ ವಿಲಾಸ ತೆರಿಗೆಯಲ್ಲಿ ವಿವಾಹ ಮಂಟಪಗಳ ವಿಲಾಸ ತೆರಿಗೆಯನ್ನು ಪಾವತಿ ಮಾಡದೇ ತೆರಿಗೆ ಸೋರಿಕೆಯಾಗುತ್ತಿದೆ.

ಆ) ತೆರಿಗೆ ಸೋರುವಿಕೆಯಾಗುವುದನ್ನು ತಪ್ಪಿಸಲು ಸರ್ಕಾರ ಜಾಗೃತಿ ಮತ್ತು ಗುಪ್ತವಾರ್ತೆ ವಿಭಾಗಗಳನ್ನು ಕಾರ್ಯನಿರ್ವಹಣೆಯಲ್ಲಿ ತೊಡಗಿಸಿರುತ್ತದೆ. ಇಲಾಖೆಯ ಗುಪ್ತವಾರ್ತೆ ಮತ್ತು ಜಾಗೃತಿ ವಿಭಾಗಗಳು ವ್ಯಾಪಾರಸ್ಥರ ಮಳಿಗೆಗಳನ್ನು ಮತ್ತು ಸರಕು ವಾಹನಗಳನ್ನು ತಪಾಸಣೆ ಮಾಡಿ ತೆರಿಗೆ ಬಾಧ್ಯತೆಯನ್ನು ಕಂಡು ಹಿಡಿದಿದ್ದಾರೆ. 1998-99ರಲ್ಲಿ ಈ ವಿಭಾಗಗಳು ಒಟ್ಟು 5162 ಕೋಟಿ ರೂ.ಗಳ ಬಚ್ಚಿಟ್ಟ ವಹಿವಾಟನ್ನು ಕಂಡು ಹಿಡಿದು ಆ ವಹಿವಾಟಿನ ಮೇಲೆ ತೆರಿಗೆ ಬಾಧ್ಯತೆ ರೂ. 186.46 ಕೋಟಿಗಳಾಗಿರುತ್ತದೆ. ಇದಲ್ಲದೆ ರೂ. 51.33 ಲಕ್ಷ ಸರಕು ವಾಹನಗಳನ್ನು ತಪಾಸಣೆ ಮಾಡಿ ದಾಖಲಾತಿಗಳನ್ನು ಸಂಗ್ರಹಿಸಿ ಅಡ್ಡ ಪರಿಶೀಲನೆಗೊಳಪಡಿಸುತ್ತಾ, ಕರನಿರ್ಧಾರಣೆ ಆದೇಶ ಮಾಡಲಾಗುತ್ತಿದೆ. ಹಾಗೂ ಮದ್ಯ (ಲಿಕ್ಕರ್) ವ್ಯಾಪಾರಸ್ಥರು ತಯಾರಿಸುವ ಮದ್ಯಸಾಲದ ವ್ಯವಹಾರವನ್ನು ಅಡ್ಡ ಪರಿಶೀಲನ ಮಾಡುವ ಮೂಲಕ ಅಂದಾಜು ರೂ. 8.00 ಕೋಟಿ ತೆರಿಗೆಯನ್ನು ಪತ್ತೆ ಹಚ್ಚಿದ್ದು, ಈ ಬಗ್ಗೆ ತೆರಿಗೆ ವಸೂಲಾತಿಗಾಗಿ ಕ್ರಮ ಕೈಗೊಳ್ಳಲಾಗಿದೆ. ಈ ಪ್ರಕ್ರಿಯೆಯು ತೆರಿಗೆ ಸಂಗ್ರಹಣೆ ಕಾರ್ಯದಲ್ಲಿ ಚುರುಕು ತಂದಿರುವುದರಿಂದ ಸರ್ಕಾರಕ್ಕೆ ಪ್ರಯೋಜನವಾಗಿದೆ.

ಇ) ತೆರಿಗೆ ಸೋರುವಿಕೆಯನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

(ರೂ. ಲಕ್ಷಗಳಲ್ಲಿ)

ಕ್ರ.	ಕ್ರಮಗಳು	1990-91	1991-92	1992-93	1993-94	1994-95	1995-96	1996-97	1997-98	1998-99	1999-2000
1	2	3	4	5	6	7	8	9	10	11	12
1.	ವ್ಯಾಪಾರಮಳಿಗೆಗಳತಪಾಸಣೆಸಂಖ್ಯೆ	3964	4731	2956	5037	6111	6861	8018	7506	5425	-
2.	ಪಟ್ಟೆಪಟ್ಟೆಬಬ್ಬಟ್ಟಮೇಮಾಟು	87886.92	163530.8	119620.6	195806	273568	313349.3	333966.7	345158.8	516221.1	358353.1
3.	ಬಬ್ಬಟ್ಟತೆರಿಗೆಮೌಲ್ಯ	2871.48	7600.51	4957.66	6923.9	9934.91	11787.49	14453.11	13128.18	18701.06	12681.27
4.	ವಸೂಲಿಮಾಡಿದರಾಜಧಾ	763.42	59.45	85.53	80.69	58.56	68.75	61.81	87.24	76.09	59
5.	ಪರೀಕ್ಷಾವರದಿಗಳಸಂಖ್ಯೆ	416	549	501	534	2677	3011	3605	3782	3426	2819
6.	ವಸೂಲಿಮಾಡಿದರಾಜಿಶುಲ್ಕ	2.22	2.88	112.9	3.5	17.84	23.11	27.49	32.62	32.62	32.3
7.	ಚಲನಚಿತ್ರಮಂದಿರಗಳತಪಾಸಣೆಸಂಖ್ಯೆ	3875	4515	5075	5653	2696	795	1257	1852	2000	1313
8.	ವಸೂಲಿಮಾಡಿದದಂಡ: ರಾಜಿಶುಲ್ಕ	15.5	19.99	19.86	28.8	12.83	1.88	2.15	6.11	8.03	4.88

1	2	3	4	5	6	7	8	9	10	11	12
9.	ಶೋಧನಾ ತಾಣಗಳಲ್ಲಿ ಪರೀಕ್ಷಿಸಿದ ಸರಕು ವಾಹನಗಳ ಸಂಖ್ಯೆ	181963	3000685	5309084	5094489	5362679	5677135	6167691	5069782	5133794	4789581
10.	ಸರಕು ವಾಹನಗಳನ್ನು ಭೌತಿಕವಾಗಿ ಪರೀಕ್ಷಿಸಿದ ಸಂಖ್ಯೆ	48774	34047	26695	35786	43983	31775	45863	37959	45903	41916
11.	ತಪಾಸಣಾ ತಾಣಗಳಲ್ಲಿ ವಸೂಲಿ ಮಾಡಿದ ದಂಡ	516.46	409.23	566.67	583.06	894.2	1321.97	1729.83	2083.95	2837.89	258792
12.	ಗುಪ್ತವಾರ್ತೆ ಜಾಗೃತಿ ಚಟುವಟಿಕೆಗಳಿಂದ ಸಂಗ್ರಹಿಸಿದ ಒಟ್ಟು ದಂಡ: ರಾಜಿ ಹಣ	1297.6	491.55	784.96	696.05	983.43	1415.71	182128	2209.92	2954.31	2622.19

ಸೂಚನೆ: ಮೆ: ಹೆಚ್. ಪಿ. ಸಿ. ಎಲ್ ಇವರಿಗೆ ಸಂಬಂಧಿಸಿದ ಒಟ್ಟು ಮೊಮಾಟು ರೂ. 642 ಕೋಟಿ ಮತ್ತು ಅದರ ಮೇಲೆ ಆಗುವ ಒಟ್ಟು ತೆರಿಗೆ ರೂ. 146 ಕೋಟಿ ಹೊರತು ಪಡಿಸಿದೆ